ಶ್ರೀ ಬಿ. ಸೋಮಶೇಖರ.—ನಾನು ಆಗಲೇ ಹೇಳಿದಂತೆ ೨೫೦ ಕಾಲೇಜುಗಳಲ್ಲಿ ವೃತ್ತಿ ಶಿಕ್ಷಣ ಕೋರ್ಸನ್ನು ಇಂಟರ್‌ಡ್ಯೂಸ್ ಮಾಡಿದ್ದೇವೆ. ಅವರಿಗೆ ಆದ್ಯತೆ ಕೊಡಬೇಕು. ಕೊಡುತ್ತೇವೆ ಅವರಲ್ಲಿ ಎಲ್ಲರಿಗೂ ಅವಕಾಶವಾಗುವುದು.

(೩) ರಾಜ್ಯದಲ್ಲಿ ಔಷಧಿ ವ್ಯಾಪಾರಗಳ ಮುಷ್ಕರದಿಂದ ಸಾರ್ವಜನಿಕರಿಗೆ ಔಷಧಿಗಳಿಂ ದೊರಕದ ಅನಾನುಕೂಲ ಆಗುವ ಬಗ್ಗೆ,

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆಮಿಸ್ಟ್ ಅಂಡ್ ಡ್ರಗ್ಗಿಸ್ಟ್ ಅಂಗಡಿಗಳು ಮುಷ್ಕರ ಮಾಡಿದ್ದರಿಂದಾಗಿ ಅತ್ಯವಶ್ಯಕ ಔಷಧಿಗಳು ದೊರೆಯದೆ ಸಾರ್ವಜನಿಕರಿಗೆ ಆಗಿರುವ ತೊಂದರೆಗಳ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು.—ಮಾನ್ಯ ಆರೋಗ್ಯ ಮಂತ್ರಿಯವರು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಬೇಡಿಕೆಗಳ ಬಗ್ಗೆ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘ ದಿನಾಂಕ ೨೫-೬-೮೮ ರಂದು ಬಂದ್ ಆಚರಿಸಲು ಕರೆ ನೀಡಿತ್ತು.

1. Better margin for the Retailers in the Drug Price Control Order.
2. Abolition of tax for drugs.
3. Professional status for Pharmacists.

ಅದರಂತೆ ದಿನಾಂಕ ೨೫-೬-೮೮ ರಂದು ಸಾಮಾನ್ಯವಾಗಿ ಔಷಧಿ ವ್ಯಾಪಾರಿಗಳ ಅಂಗಡಿಗಳು ಮುಚ್ಚಿದ್ದರೂ ಸಹ ಈ ಕೆಳಕಂಡ ಅಂಗಡಿಗಳು ಬೆಂಗಳೂರು ನಗರದಲ್ಲಿ ತೆರೆದಿದ್ದವು. ಜನತಾ ಬಜಾರ್ ಕೆ. ಜಿ. ರಸ್ತೆ, ಬೆಂಗಳೂರು, ಜನತಾ ಬಜಾರ್ ಜಯನಗರ, ಜನತಾ ಬಜಾರ್, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಜನತಾ ಬಜಾರ್. ಇ ಎಸ್.ಐ. ಆಸ್ಪತ್ರೆ, ರಾಜಾಜಿನಗರ, ಬೆಂಗಳೂರು. ಜನತಾ ಬಜಾರ್. ಕೆಮ್ಕೋ ಬೆಂಗಳೂರು. ಕಲ್ಪತರು, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು, ಸಹಕಾರಿ ವಸ್ತುಭಂಡಾರ ರಾಜಾಜಿನಗರ, ಬೆಂಗಳೂರು, ಪಾಪ್ಯುಲರ್ ಡ್ರಗ್ಗಿಸ್ಟ್, ಸಿಟಿ ಮಾರ್ಕೆಟ್, ಬೆಂಗಳೂರು. ಇದೇ ತರಹದ ವ್ಯವಸ್ಥೆಯನ್ನು ಜಿಲ್ಲಾ ಕೇಂದ್ರಗಳಲ್ಲಿಯೂ ಕೂಡ ಮಾಡಲಾಗಿತ್ತು. ಆದರೆ ಔಷಧಿಗಳು ಸಿಗಲಿಲ್ಲವೆಂದು ಯಾರಿಂದಲೂ ದೂರುಗಳು ಇದುವರೆಗೂ ಈ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ. ಇದು ಅಖಿಲ ಭಾರತ ಸಮಸ್ಯೆಯಾದ್ದರಿಂದ ಇದನ್ನು ತಡೆಗಟ್ಟಲು ಸಾಧ್ಯವಾಗಲಿಲ್ಲ. ದೆಹಲಿಯಿಂದ ಬಂದ ವರದಿಗಳ ಪ್ರಕಾರ ಈ ಬಂದ್ ಸಂಪೂರ್ಣವಾಗಿ ಯಶಸ್ವಿಯಾಗಿರುವುದಿಲ್ಲ. ಹೆಚ್ಚಿನ ಔಷಧ ವ್ಯಾಪಾರಿಗಳು ಮಧ್ಯಾಹ್ನದ ಮೇಲೆ ಅವರ ಅಂಗಡಿಗಳನ್ನು ತೆರೆದಿದ್ದರು.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಔಷಧಿಗಳು ಸಿಗಲಿಲ್ಲವೆಂದು ಯಾರಿಂದಲೂ ದೂರು ಬಂದಿಲ್ಲವೆಂದು ಉತ್ತರದಲ್ಲಿ ಮಾನ್ಯ ಸಚಿವರು ಹೇಳಿದ್ದಾರೆ. ಔಷಧ ಸಿಗಲಿಲ್ಲವೆಂದು ಹೆಲ್ತ್ ಇಲಾಖೆಯ ಸೆಕ್ರೆಟರಿಗೆ ಬರೆಯುವುದಕ್ಕಾಗುವುದಿಲ್ಲ. ೮ ಅಂಗಡಿಗಳು ಬೆಂಗಳೂರಿನಲ್ಲಿ ತೆರೆದಿದ್ದವು ಎಂದು ಹೇಳಿದ್ದೀರಿ. ಮುಖ್ಯವಾಗಿ ಜನತಾ ಬಜಾರ್‌ಗಳು ತೆರೆದಿದ್ದವು. ನಿನ್ನೆ ನಾನು ಜನತಾ ಬಜಾರ್‌ಗೆ ಹೋಗಿದ್ದೆ. ಮೆಜೆಸ್ಟಿಕ್ ವೃತ್ತದಲ್ಲಿರುವ ಜನತಾ ಬಜಾರ್‌ನಲ್ಲಿಕ್ಕೂ ನೋಡಿ ವಾಪಸ್ ಬರಬೇಕಾಯಿತು. ಕೆಲವರಿಗೆ ಔಷಧಿಗಳು ಸಿಕ್ಕಿತು, ಮತ್ತೆ ಕೆಲವರಿಗೆ ಔಷಧಿಗಳು ದೊರೆಯಲಿಲ್ಲ. ಯಾಷ್ಮುವಲ್ ಆಗಿ ಇರುವ ಡ್ರಗ್ಸ್ ಅನ್ನು ಮಾರಾಟ ಮಾಡಿದ್ದಾರೆ. ಡ್ರಗ್ಸ್ ಅಂಡ್ ಕೆಮಿಸ್ಟ್ ಅಸೋಸಿಯೇಷನ್‌ನವರು ಏನು ಬೇಡಿಕೆಗಳನ್ನು ಇಟ್ಟಿದ್ದಾರೆ ಅವುಗಳಲ್ಲಿ ಕೆಲವು ಕೇಂದ್ರ ಸರಕಾರಕ್ಕೆ ಇನ್ನು ಕೆಲವು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟಿದ್ದು ಆಗಿವೆ. ಉದಾಹರಣೆಗೆ ಹೇಳುವುದಾದರೆ ಟ್ಯಾಕ್ಸ್ ಎಕ್ಸೆಂಪ್ಷನ್ ಕೇಳುತ್ತಿದ್ದಾರೆ. ಸೇಲ್ಸ್ ಟ್ಯಾಕ್ಸ್ ನಮ್ಮ ರಾಜ್ಯ ಸರಕಾರಕ್ಕೆ ಸಂಬಂಧಪಡುತ್ತದೆ ನಮ್ಮಲ್ಲಿ ಔಷಧಿಗಳ ಮೇಲಿರತಕ್ಕಂಥ ಸೇಲ್ಸ್ ಟ್ಯಾಕ್ಸ್ ಅನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತೆ ಆಂಧ್ರ ಪ್ರದೇಶ ಮತ್ತು ತಮಿಳುನಾಡು, ವೆಸ್ಟ್ ಬೆಂಗಾಲ್ ಮುಂತಾದ ರಾಜ್ಯಗಳಿಗೂ ಕರ್ನಾಟಕ ರಾಜ್ಯಕ್ಕೂ ಔಷಧ ಮಾರಾಟ ತೆರಿಗೆಯಲ್ಲಿ ಎಷ್ಟು ವ್ಯತ್ಯಾಸವಿದೆ ಎಂದು. ಅಲ್ಲಿ ಔಷಧಿಗಳ ಮೇಲೆ ೬ ಪರ್ಸೆಂಟ್ ಮಾರಾಟ ತೆರಿಗೆಯನ್ನು ವಿಧಿಸುತ್ತಿದ್ದಾರೆ. ನಮ್ಮಲ್ಲಿ ೧೦ ರಿಂದ ೧೫ ಪರ್ಸೆಂಟ್‌ನಷ್ಟು.

ಮಾರಾಟ ತೆರಿಗೆಯನ್ನು ಔಷಧಿಗಳ ಮೇಲೆ ವಿಧಿಸುತ್ತಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿ ಏನು ತೆರಿಗೆ ಇದೆ ಎಂಬುದು ತಮಗೆ ಗೊತ್ತಿದೆ ನಾವೇನೂ ಹೆಚ್ಚಿಗೆ ಹೇಳಬೇಬೇಕಾಗಿಲ್ಲ. ಲೈಫ್ ಸೇವಿಂಗ್ ಡ್ರಗ್ಸ್. ಎಲೆಕ್ಟ್ರೋಡಸ್ ಮುಂತಾದವುಗಳಿಗೆ ಟ್ಯಾಕ್ಸ್ ಎಕ್ಸ್‌ಂಪ್‌ಷನ್ ಕೊಟ್ಟಿದ್ದೀರಿ; ಇಲ್ಲವೆಂದು ಹೇಳುವುದಿಲ್ಲ. ಆದರೆ ಅದನ್ನು ಜಿ-೬ ಡ್ರಗ್ಸ್‌ಗಳಿಗೆ ಮಾತ್ರ ಕೊಟ್ಟಿದ್ದೀರಿ. ಆದರೆ ಆಂಧ್ರಪ್ರದೇಶ, ತಮಿಳುನಾಡು, ಪಶ್ಚಿಮ ಬೆಂಗಾಲ್ ಮುತ್ತಿತರ ರಾಜ್ಯಗಳಿಗೂ ನಮ್ಮ ರಾಜ್ಯಕ್ಕೂ ಹೋಲಿಸಿ ನೋಡಿದರೆ ನಮ್ಮಲ್ಲಿ ಔಷಧಿಗಳ ಮೇಲೆ ಹೆಚ್ಚಿನ ಟ್ಯಾಕ್ಸ್ ಇದೆ. ಕೊನೆಗೆ ಇದು ಸಾಮಾನ್ಯ ಜನರ ಮೇಲೆ ಬೀಳುತ್ತದೆ. ಯಾರು ಔಷಧಿಗಳನ್ನು ಖರೀದಿ ಮಾಡುತ್ತಾರೆ ಅವರ ಮೇಲೆ ಬೀಳುತ್ತದೆ. ಇನ್ನು ಮುಖ್ಯವಾದ ಅಂಶದ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಬೇಕಾಗಿದೆ. ಪ್ರಾಹಿಬಿಟೆಡ್ ಡ್ರಗ್ಸ್ ಏನು ಇದೆ. Amplicin and hose drugs are available in all the counters without prescription. ಅವರು ಯಾರನ್ನೂ ಕೇಳಬೇಕಾಗಿಲ್ಲ, ಹಾಗೆಯೇ ಕೊಡುತ್ತಾರೆ. ಇನ್ನು ಕೆಲವನ್ನು ಡಾಕ್ಟರ್ ಕೂಡ ಪ್ರಿಸ್ಕ್ರೈಬ್ ಮಾಡುತ್ತಾರೆ. ಇನ್ನು ಕೆಲವು ಪ್ರಾಹಿಬಿಟೆಡ್ ಡ್ರಗ್ಸ್‌ಗಳಾದ Narcotic, psychotric drugs ಏನು ಇದೆ, ಇದು ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲೂ ಸಿಗುತ್ತದೆ. ಬಳ್ಳಾರಿಯ ಯಾವ ಮೆಡಿಕಲ್ ಸ್ಟೋರ್‌ನಲ್ಲಿ ಬೇಕಾದರೂ ನಾನು ತಂದು ಕೊಡುತ್ತೇನೆ. ಇದರ ಬಗ್ಗೆ ಸೂಪರ್‌ವಿಷನ್ ಕಂಟ್ರೋಲ್ ಇಲ್ಲ, ನಿಮ್ಮಲ್ಲಿರುವ ಡ್ರಗ್ಸ್ ಇನ್ಸ್‌ಪೆಕ್ಟರ್ ಏನು ಮಾಡುತ್ತಿದ್ದಾರೆಯೋ ನಮಗಂತೂ ಗೊತ್ತಿಲ್ಲ. The whole generation has completely totally spoiled ಸಾರಾಯಿ, ಹೆಂಡ ಕುಡಿಯುವ ರೀತಿಯಲ್ಲಿ ಈ ನಮ್ಮ ಯಂಗ್‌ಸ್ಟರ್ಸ್ ಏನು ಇದ್ದಾರೆ ಅವರಂ ಈಗ ಡ್ರಗ್ಸ್‌ಗಳನ್ನು ತೆಗೆದುಕೊಂಡು ಹಾಳಾಗುತ್ತಿದ್ದಾರೆ. ಪೂಸೀಟರಿಂಗ್ ಸೂಪರ್‌ವಿಷನ್ ಬಗ್ಗೆ ಹೇಗೆ ಕಂಟ್ರೋಲ್ ಮಾಡುತ್ತಿದ್ದೀರಿ ? ಔಷಧಿ ಮಾರಾಟ ಕೇಂದ್ರಗಳಲ್ಲಿ ಈ ಪ್ರಾಹಿಬಿಟೆಡ್ ಡ್ರಗ್ಸ್‌ಗಳು ಏನು ಇವೆ, ಅದನ್ನು ಮಾರಾಟ ಮಾಡದ ಹಾಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಸರಕಾರದ ಪತಿಯಿಂದ ಆ ಅಸೋಸಿಯೇಷನ್‌ನವರನ್ನು ಕರೆದಂ ಏನಾದರೂ ಮಾತನಾಡಿದ್ದೀರಾ ? ಟ್ಯಾಕ್ಸ್ ಎಕ್ಸೆಂಪ್‌ಷನ್ ಬಗ್ಗೆ ತಾವು ಏನು ಮಾಡುತ್ತೀರಿ ಎಂಬುದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟರೆ ಒಳ್ಳೆಯದಂ.

ಅಧ್ಯಕ್ಷರು. —ವೆಂಕಟರಾಮಯ್ಯನವರೇ ತಾವು ಕೇಳಿಬಿಡಿ.

† ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಅಬಾಲಿಷನ್ ಆಫ್ ಟ್ಯಾಕ್ಸ್ ಫಾರ್ ಡ್ರಗ್ಸ್ ಜೊತೆ professional status for Pharm cist... ಇನ್ನೊಂದು ಡಿಮ್ಯಾಂಡ್ ಇದೆ. ಅದನ್ನು ತಾವು ಮಾಡಬೇಕಾಗಿರುವುದು. ಅದರ ಬಗ್ಗೆ ತಾವು ಯೋಚನೆ ಮಾಡಬೇಕು. ಮೊದಲಿನಿಂದ ಈ ಡಿಮ್ಯಾಂಡ್ ಇದೆ. ಫಾರ್ಮಸಿಸ್ಟ್ ಸ್ಟೂಡೆಂಟ್ಸ್ ಇದರ ಬಗ್ಗೆ ಅನೇಕ ಸಾರಿ ಸ್ಟ್ರೈಕ್ ಮಾಡಿದರು. ಈ ಬಗ್ಗೆ ಅವರ ಬೇಡಿಕೆಗಳನ್ನು ಇಟ್ಟಿದ್ದರು. ಕರ್ನಾಟಕದಲ್ಲಿ ಒಂದು ಸಾವಿರ ಡ್ರಗ್ಸ್ ಷಾಪ್‌ಗಳು ಇರಬಹುದು ಎಂದು ಕಾಣುತ್ತದೆ. ಆದರೆ ಇಲ್ಲಿ ಎಂಟು ಷಾಪ್‌ಗಳನ್ನು ಮಾತ್ರ ತೆರೆದಿದ್ದೀರಿ. ಒಂದು ಸಾವಿರ ಒಟ್ಟು ಷಾಪ್‌ಗಳು ಇರುವ ಕಡೆಯಲ್ಲಿ ಕೇವಲ ಎಂಟು ಷಾಪ್‌ಗಳನ್ನು ತೆರೆದಿದ್ದೀರಿ. ಇದರಿಂದ ಸಾಮಾನ್ಯ ಜನತೆಗೆ ತೊಂದರೆಯಾಗುವುದಿಲ್ಲವೇ ? ಸಾಹುಕಾರರು ಎಲ್ಲೋ ಹೋಗಿ ಖರೀದಿ ಮಾಡಿಕೊಂಡು ಬರುತ್ತಾರೆ, ಅವರಿಗೆ ಪ್ರಾಬ್ಲಮ್ ಇರುವುದಿಲ್ಲ, ಡಾಕ್ಟರ್ಸ್ ಕೊಟ್ಟು ಬಿಡುತ್ತಾರೆ. ಬಡವರಿಗೆ ಪ್ರಾಣಾಪಾಯದ ಖಾಯಿಲೆ ಬಂದರೆ ಅವರ ಗತಿಯೇನು ? ಬೇರೆ ಕಡೆಯಲ್ಲಿ ಏನು ಮಾಡಬೇಕು ? ಬೆಂಗಳೂರು ನಗರದಲ್ಲಿ ಎಂಟು ಕಡೆ ಓಪನ್ ಮಾಡಿದ್ದೀರಿ. ಬೇರೆ ಕಡೆಗಳಲ್ಲಿ ಅವರ ಗತಿ ಏನು ಎನ್ನುವ ಬಗ್ಗೆ ತಾವು ಯೋಚನೆ ಮಾಡಬೇಕು. ಆದ್ದರಿಂದ ತಾವು ಅವರನ್ನು ಕರೆಸಿ ಕರ್ನಾಟಕದಲ್ಲಿ ಈ ಪ್ರಾಬ್ಲಮ್ ಏನು ಇದೆ ಅದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಿರುವುದರಿಂದ ಆ ಡಿಮ್ಯಾಂಡ್ಸ್ ಬಗ್ಗೆ ಮಾತನಾಡಿ ಡ್ರಗ್ಸ್, ಅಂಗಡಿಗಳನ್ನು ಮತ್ತೆ ಎತಕ್ಕೆ ಓಪನ್ ಮಾಡಿಸಬಾರದು? ಇಲ್ಲದೇ ಹೋದರೆ ಮಾನ್ಯ ಭೂಪತಿಯವರು ಹೇಳಿದ ಹಾಗೆ ಅನಧಿಕೃತ ಷಾಪ್‌ಗಳಲ್ಲಿ ಅಡಲ್ಟ್‌ರೇಟೆಡ್ ಡ್ರಗ್ಸ್ ಕೊಟ್ಟುಬಿಡುತ್ತಾರೆ. ಪಾಪ, ಬಡವರು ಏನು ಕೊಡುತ್ತಾರೆ, ಅದನ್ನು ತೆಗೆದುಕೊಂಡು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಪ್ರಾಯೋಲೆಯನ್ನು ಇನ್ನೂ ಚಾಸ್ತಿ ಮಾಡಿಕೊಂಡು ಪ್ರಾಣ ಕಳೆದುಕೊಳ್ಳುವ ವ್ಯವಸ್ಥೆಯಾಗುತ್ತದೆ. ಆದ್ದರಿಂದ ತಾವು ತುರ್ತು ಕ್ರಮ ತೆಗೆದುಕೊಂಡು ಇದನ್ನು ಪರಿಹಾರ ಮಾಡಿ ಜನತೆಗೆ ಸಹಾಯ ಮಾಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಕೆಲವು ಔಷಧಿಗಳ ಮೇಲೆ ಮಾರಾಟ ತೆರಿಗೆಯನ್ನು ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಜಾಸ್ತಿ ಇದೆ ಎಂದು ಹೇಳಿದ್ದಾರೆ. ಬಹುಶಃ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಅವರ ಇನ್‌ಕಂ ಕೂಡಾ ಬೇರೆ ಬೇರೆ ರೀತಿಯಲ್ಲಿ ಹೆಚ್ಚು ಇದೆ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಎಷ್ಟು ರಿಯಾಯಿತಿ ಕೊಡುವುದಕ್ಕೆ ಸಾಧ್ಯ ಇದೆ. ಅಷ್ಟು ರಿಯಾಯಿತಿಯನ್ನೂ ಮಾನ್ಯ ಹಣಕಾಸಿನ ಸಚಿವರು ಕೊಟ್ಟಿದ್ದಾರೆ. ಇದನ್ನು ಮತ್ತೆ ಪುನರ್ ಪರಿಶೀಲನೆ ಮಾಡುವಂಥ ಕಾಲದಲ್ಲಿ ಮುಂದಿನ ಹಣಕಾಸಿನ ಪರಿಸ್ಥಿತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕು ಎಂದು ನನ್ನ ಇಲಾಖೆಯಿಂದ ಒಂದು ಪ್ರಸ್ತಾವನೆಯನ್ನು ಇಟ್ಟಿದ್ದೇವೆ. ಎರಡನೆಯದಾಗಿ ಡ್ರಗ್ಸ್ ಕಂಟ್ರೋಲರ್ ಎಂದು ನಮ್ಮಲ್ಲಿ ಇದ್ದಾರೆ. ನಾಲ್ಕು ಡಿವಿಜನ್‌ನಲ್ಲಿ ಅಸಿಸ್ಟೆಂಟ್ ಡ್ರಗ್ಸ್ ಕಂಟ್ರೋಲರ್ಸ್ ಇದ್ದಾರೆ. ಇನ್ಸ್‌ಪೆಕ್ಟರ್‌ಗಳು ಇದ್ದಾರೆ. ಔಷಧಿ ಮಾರಾಟ ಮಾಡತಕ್ಕಂಥವರು ಲೈಸೆನ್ಸನ್ನು ತೆಗೆದುಕೊಳ್ಳಬೇಕು ಮತ್ತು ಇಂಥಿಂಥದ್ದೇ ಮಾರಾಟ ಮಾಡಬೇಕು ಎಂದು ಒಂದು ನಿಯಮ ಇದೆ. ಅಲ್ಲಿ ಹೆಚ್ಚು ಕಡಿಮೆ ಮಾಡಿದವರ ಮೇಲೆ ಕೇಸ್ ಕೂಡಾ ಹಾಕಿದ್ದೇವೆ. ಇದೆಲ್ಲಾ ಪರಿಣಾಮದಿಂದ ಡ್ರಗ್ಸನ್ನು ಕಂಟ್ರೋಲ್‌ನಲ್ಲಿ ಇಟ್ಟಿದ್ದೇವೆ.

ಶ್ರೀ ಯು. ಭೂಪತಿ.—ತಾವು ಸರ್ಕಾರದ ಪರವಾಗಿ ಇನ್ಸ್‌ಪೆಕ್ಟರ್‌ಗಳಿಂದ ಸಾಕಷ್ಟು ಕಂಟ್ರೋಲ್ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ, ಆದರೆ ಅಲ್ಲಿ ಕಂಟ್ರೋಲ್ ಆಗಿಲ್ಲ. ನಿಮಗೆ ನಾನು ಹೇಳಿದೆ. Narcotic, steerides, psychotric drugs.....ನೀವು ಯಾವುದೇ ಡ್ರಗ್ಸ್‌ನ್ನು ಇದರಲ್ಲಿ ಕೇಳಿದರೆ, ಒಂದು ಗಂಟೆ ಟೈಮ್ ಕೊಟ್ಟರೆ ತಂದು ಕೊಡುತ್ತೇನೆ. ನಿಮಗೆ ಔಷಧಿಯನ್ನು ತಂದುಕೊಡಬೇಕು ಎಂದು ಹೇಳಿದರೆ ಒಂದು ಗಂಟೆಯಲ್ಲಿ ತಂದುಕೊಡುತ್ತೇನೆ. ಏಕೆಂದರೆ ಈ ಡ್ರಗ್ಸ್‌ಗಳಿಂದ ಯುವ ಜನಾಂಗ ಹಾಳಾಗಿದೆ.

ಶ್ರೀ ಬಿ. ರಾಚಯ್ಯ.—ಡ್ರಗ್ಸ್ ಕಂಟ್ರೋಲರ್ ಎಂದು ಇದ್ದಾರೆ. ಇಂಥ ಕಡೆ ಈ ರೀತಿ ಇದೆ ಎಂದು ತಾವು ಹೇಳಿದರೆ ಅಲ್ಲಿ ಅವರು ಇನ್ಸ್‌ಪೆಕ್ಟ್ ಮಾಡಿ ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಯು. ಭೂಪತಿ.—ಇದರ ಬಗ್ಗೆ ಒಂದು ಸೆಲ್ ಅನ್ನು ರಚನೆ ಮಾಡುವುದಕ್ಕೆ ಸಾಧ್ಯ ಇಲ್ಲವೇ ? ನಿಮ್ಮಲ್ಲಿ ಎಕ್ಸ್‌ಪರ್ಟ್ ಹ್ಯಾಂಡ್ಸ್, ಡಾಕ್ಟರ್‌ಗಳು ಇದ್ದಾರೆ ಇಲ್ಲಿ ಒಂದು ಸೆಲ್‌ನ್ನು ಪ್ರಾರಂಭ ಮಾಡಿ ಪ್ಲೂಯಿಡ್ ಎಕ್ಸಾಂಪಲ್ ಕೆಮಿಕಲ್ ಅನಾಲಿಸಿಸ್ ಮಾಡಿದರೆ ಗೊತ್ತಾಗುತ್ತದೆ. ಆಗ ಎಲ್ಲಿ ಎಲ್ಲಿ ಇಂಥಾದ್ದು ಮಾರಾಟ ಮಾಡುತ್ತಿದ್ದಾರೆ, ಎಂಬುದು ಗೊತ್ತಾಗುತ್ತದೆ. ಆಗ ಕಂಟ್ರೋಲ್ ಮಾಡಲಂವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸೆಲ್‌ನ್ನು ಸಪರೇಟ್‌ಮಾಡುವುದಕ್ಕೆ ಯೋಚನೆ ಇದೆ ಎಂದು ಒಂದು ಪ್ರೊಪೋಸಲ್‌ನ್ನು ಆದರೂ ಕೊಡುತ್ತೀರಾ? ನೀವು ಕಂಟ್ರೋಲ್ ಆಗಿದೆ ಎಂದು ಹೇಳಿದಮಾತ್ರಕ್ಕೆ ಅಲ್ಲಿ ಕಂಟ್ರೋಲ್ ಆಗುವುದಿಲ್ಲ. ಸರ್ಕಾರದ ವತಿಯಿಂದ ಸರ್ವೇಸಾಮಾನ್ಯವಾಗಿ ಮಂತ್ರಿಗಳು ಹೇಳುವ ಉತ್ತರವನ್ನು ನೀವು ಹೇಳುತ್ತೀರಿ. ನಿಮ್ಮಿಂದ ಬೇರೆ ರೀತಿಯ ಉತ್ತರವನ್ನು ನಾನು ಎಕ್ಸ್‌ಪೆಕ್ಟ್ ಮಾಡುವುದಿಲ್ಲ. ಕಂಟ್ರೋಲ್ ಆಗಿಲ್ಲ. ಇದರ ಕಡೆ ಗಮನ ಹರಿಸಿ ಎಲ್ಲೆಲ್ಲಿ ಈ ರೀತಿ ನಡೆಯುತ್ತಿದೆ, ಇದರ ಬಗ್ಗೆ ವಿಚಾರಿಸಿ.

ಶ್ರೀ ಆರ್. ವೆಂಕಟರಾಮಯ್ಯ.—ಯುವಜನತೆಯಲ್ಲಿ ಡ್ರಗ್ಸ್ ಆಡಿಷನ್ ವಿಪರೀತವಾಗಿ ಆಗಿ ಶ್ತಿದೆ. ಸ್ಪೆಷಲ್ ಯೂನಿವರ್ಸಿಟೀಸ್. ಕಾಲೇಜುಗಳಲ್ಲಿ ಇದು ಜಾಸ್ತಿಯಾಗುತ್ತಿದೆ. ದುರಾದೃಷ್ಟವಶಾತ್ ಇವನ್ನು ಕಂಟ್ರೋಲ್ ಮಾಡಬೇಕು ಎಂದರೆ ಮೊದಲು ಡ್ರಗ್ ಷಾಪ್ಸ್‌ನ್ನು ಕಂಟ್ರೋಲ್ ಮಾಡಬೇಕು. ನಿಮ್ಮ ಡ್ರಗ್ಸ್ ಇನ್ಸ್‌ಪೆಕ್ಟರ್ ಬಗ್ಗೆ ನೀವು ತಪ್ಪು ತಿಳಿದುಕೊಳ್ಳದೇ ಇದ್ದರೆ ಹೇಳುತ್ತೇನೆ. ಅವರು ಎಲ್ಲಾ ಅಂಗಡಿಗಳವರ ಹತ್ತಿರ ಶಾಮೀಲಾಗಿ ಯಾರು ಅವರಿಗೆ ಅಕ್ರಮ ಸಂಭಾವನೆಯನ್ನು ಕೊಡುವುದಿಲ್ಲವೋ ಅವರ ಮೇಲೆ ಮಾತ್ರ ಕೇಸ್ ಹಾಕುತ್ತಾರೆ. ಅಕ್ರಮ ಸಂಭಾವನೆಯನ್ನು ಕೊಡುವವರಿಗೆ ನೀವು ಮಜಾ ಮಾಡಿಕೊಂಡು ಹೋಗಿ ಎಂದು ಹೇಳುತ್ತಾರೆ. ಆದ್ದರಿಂದ ಸ್ಟ್ರಿಕ್ಟ್ ಆಗಿ ಇದನ್ನು ಎನ್‌ಫೋರ್ಸ್ ಮಾಡಿ ಪ್ರೊಹಿಬಿಟೆಡ್ ಡ್ರಗ್ಸ್, ಇವೆಯೆಲ್ಲಾ ಇವೆಲ್ಲಾ ಯುವ

ಜನರಿಗೆ ಸಿಗುವ ರೀತಿ ಮಾಡಿದರೆ ದೇಶಕ್ಕೆ ಒಳ್ಳೆಯ ಸೇವೆ ಮಾಡಿದಂತಾಗುತ್ತದೆ. ಆದ ರಿಂದ ನಿಮ್ಮ ಡ್ರಗ್ಸ್ ಇನ್ಸ್‌ಪೆಕ್ಟರ್‌ಗಳನ್ನು ನೀವು ಪೂರ್ತಿ ಕಂಟ್ರೋಲ್‌ನಲ್ಲಿ ತೆಗೆದುಕೊಳ್ಳಬೇಕು, ಇದು ಒಂದು.

೪–೦೦ ಪಿ. ಎಂ.

ಎರಡನೆಯದಾಗಿ ಈಗ ಈ ಔಷಧ ಅಂಗಡಿಗಳವರು ಮುಷ್ಕರ ಮಾಡಿರುವ ಬಗ್ಗೆ ನಾವು ಕೇಳಿದ ಪ್ರಶ್ನೆಗೆ ತಾವು ಒಂದು ಮಾತನ್ನು ಸಹ ಹೇಳಲಿಲ್ಲ. ಈಗಲಾದರೂ ಸಹ ತಾವು ಈ ಮುಷ್ಕರಕ್ಕೆ ಕಾರಣರಾದ ಸಂಘಟನೆಯವರನ್ನು ಕರೆಸಿ ಮಾತನಾಡಬೇಕು ಮತ್ತು ಇದನ್ನು ವಾಪಸ್ ತೆಗೆದುಕೊಳ್ಳುವಂತೆ ಅವರಿಗೆ ಹೇಳಲು ತಾವು ಪ್ರಯತ್ನ ಮಾಡಬೇಕು. ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯ ಎಂದು ತಾವು ಹೇಳಬಹುದು. ಆದರೂ ಸಹ ತಾವು ಈ ಬಗ್ಗೆ ಪ್ರಯತ್ನ ಮಾಡಿ ನೋಡಬೇಕು. ಈಗ ಎಲ್ಲ ಅಂಗಡಿಗಳೂ ಸಹ ಬಂದ್ ಆಗಿವೆ. ಆದ್ದರಿಂದ ಈ ಬಗ್ಗೆ ತಾವು ಕೂಡಲೇ ಅವರ ಜೊತೆ ಮಾತುಕತೆ ನಡೆಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.— ಕೆಲವು ಔಷಧಗಳು ಮಾರಾಟ ಆಗುತ್ತಿರುವುದನ್ನು ತಪ್ಪಿಸಲು ಒಂದು ಸೆಲ್ ರಚನೆ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ. ಎರಡನೆಯದಾಗಿ ಈಗ ಮುಷ್ಕರ ನಡೆಯುತ್ತಿರುವುದರಿಂದ ಕೆಲವು ಔಷಧಗಳ ಬೆಲೆಗಳು ಹೆಚ್ಚಿದ ಮತ್ತು ಬಡವರಿಗೆ ಸರಿಯಾಗಿ ಸಿಗುತ್ತಿಲ್ಲವೆಂದು ಹೇಳಿದ್ದಾರೆ, ಇದನ್ನು ಸಹ ಪರಿಶೀಲನೆ ಮಾಡಿ ಈ ಬಗ್ಗೆ ಸೂಕ್ತ ರೀತಿಯಲ್ಲಿ ಕ್ರಮ ಕೈಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ನಿಯಮ ೫೩ಳಿರ ಮೇರೆಗೆ

ವಿಷಯ.—(೧) ಲೋಕೋಪಯೋಗಿ ಇಲಾಖೆಯಲ್ಲಿರುವ ದಿನಗೂಲಿ ಕಾರ್ಮಿಕರ ಸೇವೆಯನ್ನು ಖಾಯಂಗೊಳಿಸುವ ಬಗ್ಗೆ.

ಶ್ರೀ ಆರ್. ಪುಟ್ಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಾದ್ಯಂತ ಲೋಕೋಪಯೋಗಿ ಇಲಾಖೆಯಲ್ಲಿ ಸಾವಿರಾರು ದಿನಗೂಲಿ ಕಾರ್ಮಿಕರಿದ್ದಾರೆ. ಅವರನ್ನು ಖಾಯಂ ಮಾಡಿಲ್ಲ. ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಕೂಡ ಅವರನ್ನು ಖಾಯಂಗೊಳಿಸಿ "ಸಮಾನ ಕೆಲಸಕ್ಕೆ ಸಮಾನ ವೇತನ" ಎಂಬ ಸರ್ವವಿಧಿತ ಒಪ್ಪಂದದ ಪ್ರಕಾರ ಖಾಯಂಗೊಳಿಸಿ ನ್ಯಾಯ ಪರಿಹಾರ ಕೊಡುವುದು ಸೂಕ್ತ. ಆದರೂ ಈ ವೇಳೆಗೆ ಅವರಿಗೆ ಖಾಯಂ ಮಾಡಲಿಲ್ಲ. ಬಿಸಿಲು ಮಳೆಯೆನ್ನದೆ ಹಗಲೆಲ್ಲಾ ದುಡಿದು ರಸ್ತೆಯನ್ನು ದುರಸ್ತಿಗೊಳಿಸಬೇಕಾಗಿದೆ. ಹೆಚ್ಚಾಗಿ ಕೃಷಿ ಕಾರ್ಮಿಕ ವರ್ಗದಿಂದ ಬಂದಿರುವ ಈ ಬಡ ಕಾರ್ಮಿಕರ ಕಷ್ಟ ಅಸದಳವಾಗಿದೆಯಾದರೂ. ಅವರು ನೂರಾರು ಸಲ ಧರಣಿ ಸತ್ಯಾಗ್ರಹವನ್ನು ನಡೆಸಿದರೂ ಸಹ ಅವರ ಕ್ರೋಧನ ಅರಣ್ಯರೋಧನವಾಗಿದೆ. ಆದುದರಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಇವರನ್ನು ಖಾಯಂಗೊಳಿಸಲು ತುರ್ತು ಕ್ರಮ ಕೈಕೊಳ್ಳಬೇಕೆಂದು ಮತ್ತು ಈ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ, ಲೋಕೋಪಯೋಗಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ದಿನಗೂಲಿ ನೌಕರರಿಗೆ ಕನಿಷ್ಟ ವೇತನ ಕಾಯಿದೆ ಪ್ರಕಾರ ವೇತನ ಮತ್ತು ಜೀವನ ನಿರ್ವಹಣೆ ಭತ್ಯವನ್ನು ಪಾವತಿ ಮಾಡಲಾಗುತ್ತಿದೆ. ಈ ನೌಕರರು ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ತಮಗೂ ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಹಾಗೂ ತಮ್ಮ ಸೇವೆಯನ್ನು ಕ್ರಮಬದ್ಧಗೊಳಿಸಬೇಕೆಂದು ಕೋರ್ಥಿಸಿದ್ದಾರೆ.

ಸದರಿ ದಿನಗೂಲಿ ನೌಕರರನ್ನು ಯಾವುದೇ ಮಂಜೂರಾಗದ ಖಾಲಿ ಹುದ್ದೆಗಳಲ್ಲಿ ನೇಮಕ ಮಾಡಿಲ್ಲ. ಕೆಲಸದ ಅವಶ್ಯಕತೆಗೆ ಅನುಗುಣವಾಗಿ ಅವರುಗಳನ್ನು ದಿನಗೂಲಿಯ ಮೇಲೆ ತಾತ್ಕಾಲಿಕವಾಗಿ ವಿವಿಧ ಯೋಜನಾ ಕೆಲಸಗಳ ಮೇಲೆ ನೇಮಿಸಿಕೊಳ್ಳಲಾಗಿತ್ತು. ದಿನಾಂಕ ೨೫-೭-೧೯೮೫ರಲ್ಲಿ